
ಟಿ.ಎಸ್. ಗೊರವರ, ಹನುಮಂತ ಹಾಲಗೇರಿ ಮುಂತಾದವರು ಎರಡನೇ ಮಾರ್ಗಕ್ಕೂ, ಈಚಿನವರು ಮೂರನೇ ಮಾರ್ಗಕ್ಕೂ ಸೇರುತ್ತಾರೆ. ಈಗ ಚರ್ಚೆಗೆ ಬರುತ್ತಿರುವುದು ಮೂರನೇ ಮಾರ್ಗದವರು.

ಮೇಲಿನ ಹೆಸರುಗಳ ಕುರಿತು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಹಿಂದೆ ಹೇಳಿದ ಹಾಗೆ ಇದೊಂದು ಚೌಕಟ್ಟು ಮಾತ್ರ. ಬರಹದ ಅಧ್ಯಯನ ಕ್ರಮವನ್ನು ಸ್ಪಷ್ಟಗೊಳಿಸಿಕೊಳ್ಳಲು ನಾನೇ ಹಾಕಿಕೊಂಡ ಗೆರೆಯಷ್ಟೇ. ಇದು ಪೂರ್ಣಮಟ್ಟದ ಬರಹ ಮತ್ತು ವಿಂಗಡಣೆ ಎಂದು ಹೇಳಲಾರೆ. ಮುಂದಿನವರು ಈ ಕ್ರಮವನ್ನು ಅಡ್ಡಡ್ಡ ಸೀಳಿ ಪುನರ್ ಅವಲೋಕನ ಮಾಡಿದರೂ ಸಂತೋಷವೇ. ಈ ಮೂರು ಮಾರ್ಗಗಳೂ ಅನುಸರಿಸಿದ ಕಥಾ ದಾರಿಗಳು ಬಹುಸ್ತರದಿಂದ ಕೂಡಿವೆ. ಗ್ರಾಮ ಮತ್ತು ಸಮಾಜವನ್ನು ಗ್ರಹಿಸಿದ ಬಗೆ; ಪ್ರಾದೇಶಿಕ ಚಿತ್ರಗಳನ್ನು ಭಾಷಿಕವಾಗಿ ಒಳಗೊಳ್ಳುವ ರೀತಿ; ಬದುಕಿನ ಕ್ರಮ; ನಗರ-ಗ್ರಾಮಗಳ ನಡುವಿನ ಗೆರೆಗಳ ಅಂತರ ಮತ್ತು ಒತ್ತಡಗಳು; ಮನುಷ್ಯನನ್ನು ಕೇಂದ್ರಕ್ಕೆ ತರುವಾಗಿನ ಪಲ್ಲಟಗಳು; ಕಥೆಯ ಕಟ್ಟುವಿಕೆ; ಜಾತಿ ಮತ್ತು ಧರ್ಮಗಳು ಉಂಟುಮಾಡುತ್ತಿರುವ ಕ್ಷೋಭೆ; ಕಂಪನಿ ಬದುಕಿನ ತಲ್ಲಣಗಳು; ಕಾಲಮಾನಗಳ ನಡುವೆ ಉತ್ಪತ್ತಿಗೊಂಡ ತಾತ್ವಿಕತೆ ಇತ್ಯಾದಿ ವಿಚಾರಗಳಲ್ಲಿ ಕೊಂಚ ಭಿನ್ನತೆಗಳನ್ನು ಕಾಣಲು ಸಾಧ್ಯ. ಎರಡನೇ ಮತ್ತು ಮೂರನೇ ಮಾರ್ಗಗಳು ಬದುಕನ್ನು ಕಾಣುವ ರೀತಿ ತೀರಾ ಭಿನ್ನವಲ್ಲದಿದ್ದರೂ, ಕಥೆಯ ನಿರ್ಮಾಣ ಮತ್ತು ಕೆಲ ಆಶಯಗಳ ದೃಷ್ಟಿಯಿಂದ ಎರಡನೇ ಮಾರ್ಗ ಬೇರೆಯಾಗಿ ಕಾಣುತ್ತದೆ. ವಿಶ್ಲೇಷಣೆಯ ಕ್ರಮದಲ್ಲಿ ಇದನ್ನು ಸಾಧ್ಯವಾಗಿಸಬಹುದು.




## ಕಣ್ಕಟ್ಟು ಅಥವಾ ಕಥೆಯ ಗಾರುಡಿಗತನ

ಕಥೆಗಾರನಿಗೆ ಯಾವುದರಲ್ಲಿ ಗಾರುಡಿಗತನ ಇರಬೇಕು? ಎಂಬ ಪ್ರಶ್ನೆ ಆರಂಭದಲ್ಲೇ ನುಗ್ಗುತ್ತದೆ. ನಮ್ಮ ಮಾತು-ಕಥೆಯಲ್ಲಿ ಎಲ್ಲ ಸರಿ; ಆದರೆ, ಕಥೆ 'ಕಾಡುವುದೇ' ಇಲ್ಲ ಎನ್ನುತ್ತೇವೆ. ಹಾಗೆ ಕಾಡುವಂತೆ ಮಾಡುವುದೇ ನಿಜವಾದ ಗಾರುಡಿ. ನಾನು ಓದಿರುವ ಅನೇಕ ಹೊಸಬರ ಕಥೆಗಳಿಗೆ ಈ ಗಾರುಡಿಗತನ ದಕ್ಕಿಲ್ಲ. ಆದರೆ, ಭಾಷೆ ದಕ್ಕಿದೆ. ಇದು ಈ ಕಾಲದ ದೊಡ್ಡ ಪಲ್ಲಟ. ಈ ಸಮಸ್ಯೆ ಇಂದಿನದು ಮಾತ್ರವಲ್ಲ ಪರಂಪರೆಯದೂ ಸಹ. ಇದರ ಯಶಸ್ಸು ಕಾಣುವುದು ಜನಪದರಲ್ಲಿ ಮಾತ್ರ. ನಿಂತ ನಿಲುವಿನಲ್ಲಿ ಜನಪದರು ಭಾಷೆಯ ಮೂಲಕ ವಸ್ತುವಿಗೆ ಗಾರುಡಿಯನ್ನು ತರಬಲ್ಲರು. ಬಹುತೇಕ ಕಥೆಗಾರರಿಗೆ ಭಾಷೆಯನ್ನು ಪಳಗಿಸಿ, ವಸ್ತುವನ್ನು ಕಟ್ಟುವುದು ಸವಾಲಿನ ಸಂಗತಿ. ಏಕೆಂದರೆ, ಅವರು ಹಲವು ಕಥೆಗಳನ್ನು ಬರೆಯುವುದರಿಂದ. ಕೆಲವರು ಕನ್ನಡದಲ್ಲಿ ಕೆಲವೇ ಕಥೆಗಳನ್ನು ಬರೆದು ಇಂದಿಗೂ ಉಳಿದಿದ್ದಾರೆ. ಕಾರಣವಿಷ್ಟೇ, ಅವರ ಸೃಜನಶೀಲತೆ ಅವುಗಳಲ್ಲಿ ಸಂಪೂರ್ಣ ಅಡಗಿಕೊಂಡಿದ್ದರಿಂದ ಕೊನೆತನಕ ಕಥೆಯ ಸೃಜನಶೀಲತೆ ಬತ್ತದಂತೆ ನೋಡಿಕೊಂಡಿದ್ದಾರೆ. ಈ ಮಾತುಗಳನ್ನು ಹೇಳಲು ಕಾರಣ, ಈ ಎರಡೂ ದಾರಿಗಳ ಕಂಡ ಹೊಸಬರು ಇದುವರೆಗೆ ಪ್ರಕಟಿಸಿದ ಸಂಗ್ರಹಗಳಲ್ಲಿ ಕೆಲವು ಕಥೆಗಳಲ್ಲಿ ಮಾತ್ರ ಭರವಸೆ ಹುಟ್ಟಿಸಬಲ್ಲರು. ಅವರಿಗೆ ಕಥೆಯ ಗಾರುಡಿ ಮತ್ತು ಬದುಕಿನ ಗಾರುಡಿ ಇವೆರಡರಲ್ಲಿ ಎರಡನೆಯದಕ್ಕೆ ವಾಲಿದಂತೆ ಕಾಣುತ್ತದೆ. ಇದರ ಮಧ್ಯೆಯೂ ಕೆಲ ಕಥೆಗಾರರು ಕನ್ನಡದ ಕಥೆಯ ದಾರಿಗಳನ್ನು ಮತ್ತಷ್ಟು ಅಗಲ ಮಾಡಬಲ್ಲರು ಎಂಬ ನಿರೀಕ್ಷೆ ಇದ್ದೇ ಇದೆ.

ಕಥೆಯನ್ನು 'ಹೇಳುವುದು' ಮತ್ತು 'ಕಟ್ಟುವುದು' ಎಂಬುದರ ಕುರಿತು ಗಂಭೀರವಾಗಿ ಯೋಚಿಸಬೇಕು. ವಾಸ್ತವವಾಗಿ ಇವೆರಡೂ ಕಥನ ತಂತ್ರಗಳೇ. ನವೋದಯ ಕಾಲದಲ್ಲಿ ಮಾತ್ರವಲ್ಲ, ನಮ್ಮ ಜನಪದ ಪರಂಪರೆಯಲ್ಲಿ 'ಹೇಳುವ' ಧಾಟಿ ಸಾಕಷ್ಟು ಸೃಜನಶೀಲತೆಯನ್ನು ಧರಿಸಿದೆ. 'ಕಟ್ಟುವ' ತಂತ್ರ 'ನವ್ಯ'ದಲ್ಲಿ ಹೆಚ್ಚು ಮುನ್ನೆಲೆಗೆ ಬಂತು. ನಂತರ ಈ ಧಾಟಿಯು ಬೇರೊಂದು ಆಯಾಮವನ್ನು ಪಡೆದಿದ್ದು ಚರಿತ್ರೆ. ಪ್ರಶ್ನೆ ಇರುವುದು ಈಗಿನ ಕಥೆಗಾರರು ಇವೆರೆಡನ್ನು ಒಂದುಗೂಡಿಸುವ ಪ್ರಯೋಗವನ್ನು ಹೇಗೆ ನಡೆಸಬೇಕೆಂದು. ನವ್ಯವನ್ನು ಮೀರಿ ಹೊಸ ಬಗೆಯ ಕಥನ ತಂತ್ರವನ್ನು ರೂಢಿಸಿಕೊಂಡ ಲಂಕೇಶ್, ತೇಜಸ್ವಿ, ಖಾಸನೀಸ, ಅನಂತಮೂರ್ತಿ ಮುಂತಾದವರು ಯಶಸ್ವಿಯಾಗಿದ್ದು